ಕೋರಾಪುರ ತಾಲ್ಲೂಕಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕನ್ನು ಇತರ ಸ್ಥಳಕ್ಕೆ ಸ್ಥಳಾಂತರಿಸುವುದು.

162 ಶ್ರೀ ಮಡನ ಗೋಪಾಲ ನಾಯಕ (ಕೋರಾಪುರ).—ಸಹಕಾರ ಮಂತ್ರಿಗಳು ಈ ವಿಷಯ ಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿ ಸಹಕಾರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಸರಕಾರಕ್ಕೆ ಮನವಿ ಬಂದಿದೆಯೆ;

(ಆ) ಹಾಗಿದ್ದಲ್ಲಿ ಸರಕಾರದವರು ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು;

(ಇ) ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಈಗ ಇರುವ ಸ್ಥಳದಿಂದ ಬೇರೆ ಕಡೆಗೆ ವರ್ಗಾಯಿ ಸಲು ಸರ್ಕಾರಕ್ಕೆ ಮನವಿ ಏನಾದರೂ ಬಂದಿದೆಯೇ;

(ಈ) ಬಂದಿದ್ದರೆ ಇದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು;

ಶ್ರೀ ಆರ್. ಜಾಲಪ್ಪ (ಮಾನ್ಯ ಸಹಕಾರಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಸಹಕಾರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ರೈತ ರಿಗೆ ಅನ್ಯಾಯವಾಗುತ್ತಿದೆ. ಎಂದು ಸರ್ಕಾರಕ್ಕೆ ಮನವಿ ಬಂದಿದೆಯೇ ? ಎಂದು ಕೇಳಿದ್ದಾರೆ ಅದಕ್ಕೆ ಉತ್ತರ "ಇಲ್ಲ" ಎಂದು ಕೊಟ್ಟಿದೆ ಆದರೆ ಇತ್ತೀಚಿಗೆ ಬಂದ ವರದಿಯ ಪ್ರಕಾರ ಮನವಿ ಬಂದಿದೆಯೆಂತೆ. ಇನ್ನು ಎರಡನೆಯದಾಗಿ ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು ಎಂದು ಕೇಳಿದ್ದೀರಿ. ನಾನು ಜಾಯಿಂಟ್ ರಿಜಿ ಸ್ಟ್ರಾರ್‌ರವರನ್ನು ಕಳುಹಿಸಿ ಇದರ ಬಗ್ಗೆ ಮಾಹಿತಿಯನ್ನು ತಿಳಿಸಬೇಕೆಂದು ಹೇಳಿದ್ದೇನೆ.

ಮಾನ್ಯ ಅಧ್ಯಕ್ಷರೆ, ಇನ್ನು "ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಈಗಿರುವ ಸ್ಥಳದಿಂದ ಬೇರೆ ಕಡೆಗೆ ವರ್ಗಾಯಿಸಲು ಸರ್ಕಾರಕ್ಕೆ ಮನವಿ ಏನಾದರು ಬಂದಿದೆಯೇ, ಹಾಗೆ ಬಂದಿದ್ದರೆ ಇದರ ಬಗ್ಗೆ ಸರ್ಕಾ ರದವರು ಕೈಗೊಂಡ ಕ್ರಮಗಳೇನು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಆಟೋನಮಸ್ ಬಾಡಿ ಆದ್ದರಿಂದ ಅವರಿಗೆ ನಾವು ನಿರ್ದೇತನ ಕೊಡುವುದಕ್ಕೆ ಬರುವುದಿಲ್ಲ. ನಾವು ರಿಜಿಸ್ಟ್ರಾರ್‌ರವರಿಗೆ ಪತ್ರವನ್ನು ಬರೆದು ಈ ಸ್ಥಳದಿಂದ ಬದಲಾಯಿಸಬೇಕೆಂದು ಹೇಳಿದ್ದೇನೆ.

ಶ್ರೀ ಮಡನಗೋಪಾಲ ನಾಯಕ.—ಮಾನ್ಯ ಸಚಿವರು ನನ್ನ ಮೊದಲನೇ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟರು

ಉಪಾಧ್ಯಕ್ಷರು.—ಈಗತಾನೇ ಬಂದಿದೆಯೆಂದು ಆಗಲೇ ಹೇಳಿದರು.

ಶ್ರೀ ಮಡನಗೋಪಾಲ ನಾಯಕ.—ಸ್ವಾಮಿ, ವಿದ್ಯುಚ್ಛಕ್ತಿಯೇ ಇಲ್ಲದಿರತಕ್ಕ ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಎಂಜಿನ್‌ನ್ನು ಕೊಟ್ಟಿದ್ದಾರೆ. ಈ ಇಂಜಿನ್ ಕೊಡತಕ್ಕ ಸಂಸ್ಥೆಗೂ ಮತ್ತು ಈ ಬ್ಯಾಂಕ್‌ಗೂ ಏನಾದರೂ ಸಂಬಂಧ ಇದೆಯೇ ?

ಶ್ರೀ ಆರ್. ಎಲ್. ಜಾಲಪ್ಪ —ಇದರ ಬಗ್ಗೆ ತನಿಖೆ ನಡೆಸಲು ಆದೇಶ ನೀಡಿದ್ದೇನೆ. ಸದಸ್ಯರಿಗೆ ಹೆಚ್ಚಿನ ವಿವರ ಬೇಕಾದರೆ ಬರೆದು ತಿಳಿಸುತ್ತೇನೆ.

ಶ್ರೀ ಮಡನಗೋಪಾಲ ನಾಯಕ.—ಈ ಎಂಜಿನನ್ನು ಜನರ ಆಕ್ಷೇಪಣೆಗೆ ವಿರುದ್ಧವಾಗಿ ಕೊಟ್ಟಿ ದ್ದಾರೆ ಮತ್ತು ಬಹಳ ತ್ವರಿತವಾಗಿ ಅವರಿಂದ ಸಾಲವನ್ನು ವಸೂಲ್ಮಾಡುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಈ ವಿಷಯ ನನಗೆ ಗೊತ್ತಿರಲಿಲ್ಲ. ಈಗ ಗೊತ್ತಾಯಿತು. ಬ್ಯಾಂಕ್ ನವರೂ ಮತ್ತು ಇವರೂ ಏನೇನು ಮಾಡಿದ್ದಾರೋ ಗೊತ್ತಿಲ್ಲ. ತಮಗೇನಾದರೂ ಹೆಚ್ಚಿನ ಮಾಹಿತಿ ಗೊತ್ತಿದ್ದರೆ ಅದನ್ನು ನನಗೆ ತಿಳಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅರಸೀ ಕೆರೆ ಟೌನಿನಲ್ಲಿ ಕುಡಿಯುವ ನೀರಿನ ಅಭಾವ

163 ಶ್ರೀ ಜಿ. ಎಸ್. ಬಸವರಾಜ್ (ಅರಸೀಕೆರೆ).—ನಗರಾಭಿವೃದ್ಧಿ ಮಂತ್ರಿಗಳು ಈ ವಿಷಯ ಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಅರಸೀಕೆರೆ ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

(ಆ) ನಗರ ನೀರು ಸರಬರಾಜು ಕಾಮಗಾರಿ ಇಲಾಖೆ ವತಿಯಿಂದ ಸುಮಾರು ೩ ವರ್ಷದಿಂದ ನಡೆಯುತ್ತಿರುವ ನೀರು ಸರಬರಾಜು ಯೋಜನೆ ಕೆಲಸಕಾರ್ಯ ಮುಂದಗತಿಯಿಂದ ಸಾಗುತ್ತಿರುವುದು ಸರ್ಕಾ ರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಈ ದಿಶೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗ ಳೇನು ?